ಅ) ರಾಜ್ಯದಲ್ಲಿ ಸಹಕಾರ ಸಂಘಗಳಿಂದ ಹಾಗೂ ಸಹಕಾರಿ ಬ್ಯಾಂಕುಗಳಿಂದ ರೈತರು ಕಳೆದ ಮೂರು ವರ್ಷಗಳಲ್ಲಿ ಪಡೆದ ಸಾಲದ ವಿವರ:

(ರೂ. ಲಕ್ಷಗಳಲ್ಲಿ)

	ವರ್ಷಗಳು		
ಸಾಲದ ವಿವರ	1990-91	1991-92	1992-93
1. ಅಲ್ಪಾವಧಿ	9678.87	8993.21	21105.00
2. ಮಧ್ಯಮಾವಧಿ	863.37	760.03	918.00
3. ಮಧ್ಯಮಾವಧಿ ಪರಿವರ್ತಿತ	159.58	36.53	849.60
4. ದೀರ್ಘಾವಧಿ	7216.54	9721.30	12056.95
ಒಟ್ಟು	17918.36	19511.07	34929.55

ಆ) ದಿನಾಂಕ 30-6-1993ಕ್ಕೆ 350.91 ಕೋಟಿ ರೂ.ಗಳ ಸಾಲ ಮರುಪಾವತಿಯಾಗಿಲ್ಲ. ವರ್ಷವಾರು ವಿವರಗಳು ಕೆಳಕಂಡಂತೆ ಇವೆ.

(ಕೋಟಿ ರೂ.ಗಳಲ್ಲಿ)

ಒಂದು ವರ್ಷದ ಒಳಗೆ	102.54
ಒಂದರಿಂದ ಮೂರು ವರ್ಷ	132.83
3 ವರ್ಷದಿಂದ ಮೇಲ್ಪಟ್ಟು	115.54
ಒಟ್ಟು	350.91

ಮರುಪಾವತಿಯಾಗಿಲ್ಲವಾದ ಸಾಲದಲ್ಲಿ ಸೇರಿರುವ ಬಡ್ಡಿ 147.14ಕೋಟಿ ರೂ.ಗಳಷ್ಟು ಇರುತ್ತದೆ.

ಇ) ಇಲ್ಲ.

ಈ) ರೈತರು ಹಾಗೂ ಸಹಕಾರ ಸಂಘಗಳ ಹಿತದೃಷ್ಟಿಯಿಂದ ಬಡ್ಡಿ ಮನ್ನಾ ಮಾಡಿರುವುದಿಲ್ಲ.

ಮೂಲ್ಕಿ ಸೊಸೈಟಿಯಲ್ಲಿ ಚಿನ್ನಾಭರಣದ ಕಳುವು

561 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿ ಸಂಘದಲ್ಲಿ ಅಡವಿಟ್ಟ ಚಿನ್ನಾಭರಣ ಎಷ್ಟು ಮೌಲ್ಯದ್ದು ಕಳುವಾಗಿದೆ?

ಆ) ಇನ್ಶೂರೆನ್ಸಿನಿಂದ ಎಷ್ಟು ಪರಿಹಾರ ಸಿಕ್ಕಿದೆ?

ಇ) ಈ ಸೊಸೈಟಿಯ ಆರ್ಥಿಕ ಕಷ್ಟದಿಂದಾಗಿ ಈಗ ನಡೆಸಲಿಕ್ಕಾಗದ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಸೊಸೈಟಿಯ ಪುನಃ ಯೋಗ್ಯ ರೀತಿಯಲ್ಲಿ ವ್ಯವಹಾರ ನಡೆಸಲು ಸರ್ಕಾರ ಏನು ಕ್ರಮ ಕೈಗೊಳ್ಳುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ರೂ. 22,64,062-00

ಆ) ರೂ. 6,42,870-00

ಇ) ಹೌದು.

ಈ) ಸಂಘದ ಆಡಳಿತ ಮಂಡಳಿಯನ್ನು ಹದ್ದುಗೊಳಿಸಿ, ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗಿದೆ. ಈ ಸಂಘವು ಪುನಃ ಯೋಗ್ಯ ರೀತಿಯಲ್ಲಿ ವ್ಯವಹಾರ ನಡೆಸಲು ವ್ಯವಹಾರ ಅಭಿವೃದ್ಧಿ ಯೋಜನೆ (ಬಿಡಿಪಿ) ಯ ಮುಖಾಂತರ ವ್ಯಾಪಕ ಕಾರ್ಯಕ್ರಮ ಹಾಕಿಕೊಳ್ಳಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ಪಂಚಾಯತಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಸಂಖ್ಯೆ

559 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಬಾರಿಯ ಚುನಾವಣೆಯಲ್ಲಿ ಆಯ್ಕೆಯಾದ ಮಂಡಳ ಅಧ್ಯಕ್ಷರು, ಉಪಾಧ್ಯಕ್ಷರುಗಳಾರು (ವಿವರ ಕೊಡಿ)

ಆ) ಅವರಲ್ಲಿ

(1) ಮಹಿಳಾ ಅಧ್ಯಕ್ಷರುಗಳಿಷ್ಟು ;
(2) ಮಹಿಳಾ ಉಪಾಧ್ಯಕ್ಷರುಗಳಿಷ್ಟು ;
(3) ಪರಿಶಿಷ್ಟ ಜಾತಿ ಅಧ್ಯಕ್ಷರುಗಳಿಷ್ಟು ;
(4) ಪರಿಶಿಷ್ಟ ಜಾತಿ ಉಪಾಧ್ಯಕ್ಷರುಗಳಿಷ್ಟು ;
(5) ಪರಿಶಿಷ್ಟ ಪಂಗಡಗಳ ಅಧ್ಯಕ್ಷರುಗಳಿಷ್ಟು ;
(6) ಪರಿಶಿಷ್ಟ ಪಂಗಡಗಳ ಉಪಾಧ್ಯಕ್ಷರುಗಳಿಷ್ಟು ;
(7) ಹಿಂದುಳಿದ ವರ್ಗಗಳ ಉಪಾಧ್ಯಕ್ಷರುಗಳಿಷ್ಟು ;
(8) ಹಿಂದುಳಿದ ವರ್ಗಗಳ ಉಪಾಧ್ಯಕ್ಷರುಗಳಿಷ್ಟು ;

ಇ) ಈ ವಿಭಾಗದ ಅಧ್ಯಕ್ಷರ ಕಾರ್ಯನಿರ್ವಹಣೆಗೆ ಅನುಕೂಲವಾಗುವಂತೆ ಸರ್ಕಾರ ಏನು ಸಹಾಯ ಒದಗಿಸುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.):

ಅ)

ಅಧ್ಯಕ್ಷರು	ಉಪಾಧ್ಯಕ್ಷರು
336	331

(ಪಟ್ಟಿಯನ್ನು ಲಗತ್ತಿಸಿದೆ)

ಆ)

1) ಮಹಿಳಾ ಅಧ್ಯಕ್ಷರು	132
2) ಮಹಿಳಾ ಉಪಾಧ್ಯಕ್ಷರು	149
3) ಪರಿಶಿಷ್ಟ ಜಾತಿ ಅಧ್ಯಕ್ಷರು	53
4) ಪರಿಶಿಷ್ಟ ಜಾತಿ ಉಪಾಧ್ಯಕ್ಷರು	59
5) ಪರಿಶಿಷ್ಟ ಪಂಗಡದ ಅಧ್ಯಕ್ಷರು	18
6) ಪರಿಶಿಷ್ಟ ಪಂಗಡದ ಉಪಾಧ್ಯಕ್ಷರು	19
7) ಹಿಂದುಳಿದ ವರ್ಗಗಳ ಅಧ್ಯಕ್ಷರು	125
8) ಹಿಂದುಳಿದ ವರ್ಗಗಳ ಉಪಾಧ್ಯಕ್ಷರು	127

ಇ) ಅಗತ್ಯವಾದ ಎಲ್ಲಾ ಸಹಾಯವು ಗ್ರಾಮ ಪಂಚಾಯತಿಗಳಿಂದ ದೊರಕುತ್ತದೆ.